



**ಮಾರ್ಚ್ ಬರುತ್ತಿದ್ದಂತೆ ಜಪಾನ್ ದೇಶವನ್ನು ಚೆರ್ರಿ ಹೂಗಳ ರೂಪದಲ್ಲಿ ಹೊಸ ತಾರುಣ್ಯ ಆವರಿಸಿಕೊಳ್ಳುತ್ತದೆ. ಎಲ್ಲೆಂದರಲ್ಲಿ ಅರಳಿ ನಗು ಸೂಸುವ ಚೆರ್ರಿ ಹೂಗಳು ದೇಶಕ್ಕೆ–ಪ್ರಕೃತಿಗೆ ಜೀವಕಳೆ ತುಂಬುತ್ತವೆ.**

■ ಶಾಂತಾ ಜಯಾನಂದ

ಜಪಾನ್ ಪ್ರವಾಸ ಹೋಗೋಣ ಎಂದು ಗೆಳತಿಯರೆಲ್ಲಾ ಹೇಳಿದಾಗ ನನ್ನ ಎದೆಬಡಿತ ಹೆಚ್ಚಾಗಿತ್ತು. ಎರಡು ವರ್ಷಗಳ ಹಿಂದೆ ಜಪಾನ್‌ಗೆ ಹೊರಡಲು ಸಿದ್ಧತೆ ಮಾಡಿಕೊಂಡಿದ್ದವರು, ಕೊರೊನಾ ಭೀತಿಯಿಂದ ಕೈಬಿಟ್ಟಿದ್ದೆವು. ಈಗ ಆ ಕನಸಿಗೆ ಮತ್ತೆ ಜೀವ ಬಂದಿತ್ತು. ಯುಗಾದಿ ಹಬ್ಬದ ಸಡಗರ ಮುಗಿಸಿ ಹೊರಡಲು ಅಣಿಯಾದ ನಾವು, ಕೌಲಾಲಂಪುರ ಮೂಲಕ ಜಪಾನಿನ ಟೋಕಿಯೊ ತಲುಪಿದೆವು.

ಮಾರ್ಚ್ ತಿಂಗಳು ಜಪಾನಿಗೆ ಯೌವನ ತುಂಬುವ ಸಮಯ. ಎಲ್ಲೆಲ್ಲೂ ಚೆರ್ರಿ ಹೂಗಳು ನಗುಚೆಲ್ಲುವ ಹೊತ್ತು. ಹೂಗಳಷ್ಟೇ ಅಲ್ಲ, ಅವುಗಳೊಂದಿಗೆ ಎಲ್ಲೆಡೆ ಸಂತಸ–ಸಡಗರವೂ ಅರಳುವ ಕಾಲ. ಜಪಾನಿನ ಈ 'ಚೆರ್ರಿ ಬ್ಲಾಸಂ' ಸಂಭ್ರಮ ಕಣ್ತುಂಬಿಕೊಳ್ಳಲೆಂದೇ ವಿಶ್ವದೆಲ್ಲೆಡೆಯಿಂದ ಜನರು ದಂಡುದಂಡಾಗಿ ಬರುತ್ತಾರೆ. ನಾವು ಕೂಡ ಅದೇ ಕಾತರದೊಂದಿಗೆ ಜಪಾನ್‌ಗೆ ಹೊರಟಿದ್ದೆವು.

### ಹೂಗಳ ತೇರು 'ಸಕುರಾ ಮತ್ಸುರಿ'

ಮಾರ್ಚ್ ಬರುತ್ತಿದ್ದಂತೆ ಜಪಾನ್‌ನ ಹಾದಿ ಬೀದಿಗಳಲ್ಲಿ ಹೂಗಳ ತೇರು ಹೊರಟಂತೆ ಕಾಣುತ್ತದೆ. ತಿಳಿ ಗುಲಾಬಿ, ಕಡು ಗುಲಾಬಿ ಮತ್ತು ಬಿಳಿ ಬಣ್ಣದ ಸುಂದರ ಚೆರ್ರಿ